Compensation for the lands Acquired under Upper Krishna Project

706. **Sri K. SANGAN GOWDA** (Lingsugur).—

Will the Minister for Revenue be pleased to state :—

(*a*) whether the Government has appointed a Special Land Acquisition Officer for acquiring lands for Upper Krishna Project ;

(*b*) the legal impediments in applying the emergency clause under Land Acquisition Act for acquiring lands ;

(*c*) whether the Government will pay 75 per cent of the compensation amount in advance in order to facilitate the losers of the land to enable them to purchase the lands wherever they choose ; if not the reasons therefor ?

Sri H. V. KOUJALGI (Minister for Revenue).—

(*a*) No.

(*b*) The provision of Section 17 of L.A. Act cannot be applied to such cases when emergent need to occupy the land is not established.

(*c*) The question of paying advance compensation will arise after publication of final notification under section 6 of L.A. Act.

ಶ್ರೀ ಕೆ. ಸಂಗನಗೌಡ.—ಸ್ವಾಮಿ, ತಾವು 140 ಕೋಟಿ ರೂಪಾಯಿ ಪ್ರಾಜೆಕ್ಟ್‌ನ್ನು ಕಟ್ಟಲಿಕ್ಕೆ ಹತ್ತಿದ್ದೀರಿ. ಅದು 1963ನೇ ಇಸವಿಯಿಂದಲೂ ಪ್ರಾರಂಭವಾಗಿದೆ. 6 ವರ್ಷವಾದರೂ ಕೂಡ ಇದುವರೆಗೆ ಅಲ್ಲಿಗೆ ರ್‍ಯಾಂಡ್ ಅಕ್ವಿಸಿಷನ್ ಆಫೀಸರನ್ನು ನೇಮಕ ಮಾಡಲಿಲ್ಲ. ಇನ್ನು ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ಇನ್ನೊಬ್ಬ ಅಸಿಸ್ಟೆಂಟ್ ಕಮೀಷನರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಸಂಗನಗೌಡ.—ಈ ಪ್ರಾಜೆಕ್ಟ್‌ಗೆ ಯಾವ ಅಧಿಕಾರಿಗಳು ಬೇಕೋ ಅವರನ್ನು ಸರ್ಕಾರಕ್ಕೆ ಭಾರ ಬೀಳದಂತೆ ತಮ್ಮ ಸಿಬ್ಬಂದಿಯಲ್ಲಿ ಖೋತಾ ಮಾಡಿ ಅದೇ ಖರ್ಚಿನಲ್ಲಿ ಅಕ್ವಿಸಿಷನ್ ಆಫೀಸರಾಗಿ ನೇಮಕ ಮಾಡುವುದಕ್ಕಾಗುವುದಿಲ್ಲವೇ ! ಹಾಗೆ ನೇಮಕ ಮಾಡಿದರೆ ಈ ಪ್ರಾಜೆಕ್ಟ್ ಕೆಲಸ ನುಗಮವಾಗಿ ಸಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ !

ಶ್ರೀ ಎಚ್. ವಿ. ಕೌಜಲಗಿ.—ಈ ಸೂಚನೆ ಮೊದಲಿನಿಂದಲೂ ಬಂದಿರಲಿಲ್ಲ. ತಾವು ಏನು ಹೇಳುತ್ತೀರೋ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀರ್.—ಈ ಪ್ರಾಜೆಕ್ಟ್‌ಗಾಗಿ ಭೂಮಿಯನ್ನು ವಶಪಡಿಸಿಕೊಂಡವರ ಬಗ್ಗೆ ಎಷ್ಟೇ ಮನವಿಗಳು ಬಂದಿದ್ದರೂ ಇದುವರೆಗೆ ಕಾಂಪನ್ಸೇಷನ್ ಸಿಕ್ಕಿಲ್ಲ. ಈಗ ಅದು ಪ್ರಾರಂಭವಾಗಿ 10 ವರ್ಷವಾದರೂ ಅಲ್ಲಿ ರ್‍ಯಾಂಡ್ ಅಕ್ವಿಸಿಷನ್ ಆಫೀಸರನ್ನು ನೇಮಕ ಮಾಡಲಿಲ್ಲ. ಆದುದರಿಂದ ಆದಷ್ಟು ತೀವ್ರವಾಗಿ ಆಫೀಸರನ್ನು ನೇಮಕ ಮಾಡಿ ಜನರಿಗೆ ಕೊಂದರೆಯಾಗಿರುವುದನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದರ ಬಗ್ಗೆ ವಿಚಾರಣೆ ಮಾಡಿ ಜನರಿಗೆ ಕೊಂದರೆಯಾಗದಂತೆ ಆಫೀಸರನ್ನು ನೇಮಕ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ.

Sri RAJA PID NAIK.—Are the Government aware that since five years lands have been acquired and buildings have been constructed in Narayanpura dam site and yet so far no compensation has been paid and may I know the reason for the delay ?

Sri H. V. KOUJALGI.—It is a fact that in some cases there is delay in payment of compensation. But the procedure is so elaborate that sometimes delay is caused without our intending it.

Sri V. N. PATIL.—May I know whether compensation will be paid first to those people whose lands are going to be acquired before the construction work starts and whether arrangement will be made to allot additional land available to the Government to those who lose their lands ?

Sri H. V. KOUJALGI.—It is the policy of the Government to help the affected persons by giving lands elsewhere if they are available.

ಶ್ರೀ ಎಸ್. ಎಂ. ಗುರೆಡ್ಡಿ.—ಇಲ್ಲಿಯ ಪರಿಸ್ಥಿತಿ ಏನಾಗಿದೆ ಎಂದರೆ ಭೂಮಿ ತೆಗೆದು ಕೊಂಡಿದ್ದಾರೆ, ಅರ್ದನ್ ಡ್ಯಾಂ ಕೆಲಸ ಪ್ರಾರಂಭವಾಗಿದೆ. ಭೂಮಿಯನ್ನು ಕಳೆದುಕೊಂಡಿದ್ದರೂ ಹಣ್ಣೆ ಕೊಡುವುದು ತಪ್ಪಲಿಲ್ಲ. ಒಡ ಕುಟುಂಬಗಳು ಊರು ಬಿಡಲಕ್ಕೆ ಹತ್ತಿವೆ. ಈಗಾಗಲೇ 75 ಪರ್ಸೆಂಟ್ ಕಾಂಪೆನ್‌ಸೇಷನ್ ಕೊಡಬೇಕು ಎಂದು ತೀರ್ಮಾನ ಮಾಡಿರುವುದನ್ನು ತೀವ್ರ ಕೊಟ್ಟರೆ ಎಲ್ಲಿಯಾದರೂ ಭೂಮಿ ಕೊಳ್ಳಲು ಸಾಧ್ಯವಾಗುತ್ತದೆ. ಅದರ ವ್ಯವಸ್ಥೆ ಏನಾದರೂ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಕಾಯಿದೆ ಪ್ರಕಾರ ನೋಟೀಸ್ ಆದಮೇಲೆ 75 ಪರ್ಸೆಂಟ್ ಕಾಂಪೆನ್‌ಸೇಷನ್ ಕೊಡಲಿಕ್ಕೆ ಬರುತ್ತದೆ. ಹಣ್ಣೆ ಕೊಡುವ ಸಂಬಂಧದಲ್ಲಿ ಯಾರು ಪೂರ್ತಿ ಭೂಮಿ ಯನ್ನು ಕಳೆದುಕೊಂಡಿದ್ದಾರೆ ಅವರಿಂದ ವಸೂಲು ಮಾಡುತ್ತಿಲ್ಲ. ಯಾರು ಸ್ವಲ್ಪಮಟ್ಟಿಗೆ ಕಳೆದು ಕೊಂಡಿದ್ದಾರೆ, ಅಂಥವರಿಗೆ ಕಡಮೆ ಮಾಡಲಕ್ಕೆ ಬರುವುದಿಲ್ಲ. ನರ್ಚ್ ಆದ ನಂತರ ಅದನ್ನು ವಿಚಾರ ಮಾಡಬೇಕು. ಅಲ್ಲಯವರಿಗೂ ಸ್ವಲ್ಪ ತಡವಾಗುತ್ತದೆ. ಹೆಚ್ಚು ಕೊಟ್ಟಿರುವ ಹಣವನ್ನು ಮುಂದೆ ಅಡ್‌ಜಸ್ಟ್ ಮಾಡಿಕೊಳ್ಳಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಶರಾವತಿ ವ್ಯಾಲಿ ಪ್ರಾಜೆಕ್ಟ್ ಕಟ್ಟಬೇಕಾದರೆ ಮುಳುಗಡೆಯಾಗ ತಕ್ಕ ಜನರಿಗೆ ಕೆರೆ ಕಟ್ಟಿ ಕೊಡುತ್ತೇವೆ, ನೀರಾವರಿ ಸೌಕರ್ಯ ಕೊಡುತ್ತೇವೆ, ಭೂಮಿ ಕೊಡುತ್ತೇವೆ, ಕಾಂಪೆನ್‌ಸೇಷನ್ ಕೊಡುತ್ತೇವೆ ಎನ್ನುವ ವಚನ ಕೊಟ್ಟು ಮುಳುಗಡೆಯಾಗಿರತಕ್ಕ ಜನರಿಗೆ ಎರ್ಲೋ ಕೆರೆ ಕಟ್ಟೆ ಒಂದೂ ಇಲ್ಲದೆ ನೀರಾವರಿಗೆ ಅನುಕೂಲವಿಲ್ಲದ ಪ್ರದೇಶದಲ್ಲಿ ಜಮೀನು ಕೊಟ್ಟಿದ್ದಾರೆ. ಅಪ್ಪರ್ ಕೃಷ್ಣ ಯೋಜನೆ ಸಂಬಂಧದಲ್ಲಿ ಆ ಪ್ರದೇಶದಲ್ಲಿ ಮುಳುಗಡೆಯಾಗತಕ್ಕ ಜನರಿಗೆ ಶರಾವತಿ ಪ್ರದೇಶದ ಜನರಿಗೆ ಉಂಟಾದ ಪರಿಸ್ಥಿತಿ ಉಂಟಾಗದೆ ಇರಲು ಅವರಿಗೆ ಪ್ರಾಜೆಕ್ಟ್ ನಿಂದ ನೀರಾವರಿ ಅನುಕೂಲವಿರುವ ಪ್ರದೇಶದಲ್ಲಿ ಜಮೀನು ಕೊಡುವುದಕ್ಕೆ ಆದ್ಯತೆಯನ್ನು ಕೊಡುತ್ತೀರಾ ಹೇಗೆ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಮಾಹಿತಿಯನ್ನು ಒದಗಿಸುತ್ತೇನೆ.

1-30 P.M.

ಶ್ರೀ ಬಾಪೂಗೌಡ.—ಕೃಷ್ಣ ಮೇಲ್ದಂಡೆ ಯೋಜನೆಗೆ ಭೂಮಿ ಸಾಕಷ್ಟು ವಶಪಡಿಸಿಕೊಳ್ಳ ರಾಗಿದೆ. ಅದಕ್ಕೆ ಕ್ಯಾಪ್ ಕಾಂಪನ್ಸೇಷನ್ ಕೊಡುತ್ತಿದ್ದೀರಾ ? ಕೊಟ್ಟಿದ್ದರೆ ಸರಕಾರ ಎಷ್ಟು ಕೊಟ್ಟಿದೆ ?

ಶ್ರೀ ಎಚ್. ವಿ. ಕೌಜಲಗಿ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ಕೆ. ಸಂಗನಗೌಡ.—ನಾರಾಯಣಪುರದಲ್ಲಿ ಅರ್ದನ್ ಡ್ಯಾಂ ಕೆಲಸ ಪ್ರಾರಂಭವಾಗಿದೆ, ರೈಟ್ ಬ್ಯಾಂಕಿನಲ್ಲಿ ಕೆಲಸಮಾಡಲು ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅದುದರಿಂದ ನೆಗೋಷಿಯೇಷನ್ ಮೂಲಕವಾದರೂ ಜಮೀನು ಪಡೆದುಕೊಳ್ಳಲು ಅವಕಾಶ ಮಾಡುತ್ತೀರಾ ? ಅಥವ 1965ರ ಇರಿಗೇಷನ್ ಆಕ್ಟ್ ಪ್ರಕಾರ ಸೆಕ್ಷಷನ್ 5ರ ಪ್ರಕಾರ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನೆಗೋಷಿಯೇಷನ್ ಮಾಡುವುದಕ್ಕೆ ಬರುತ್ತದೆ, ಸೆಕ್ಷಷನ್ 4ರ ಪ್ರಕಾರ ನೋಟಿಫಿಕೇಷನ್ ಮಾಡಿ ನೆಗೋಷಿಯೇಷನ್ ಮಾಡಬಹುದು. ಜನರು ಸಹಕರಿಸಿದರೆ ನೆಗೋಷಿಯೇಷನ್ನಿಗೆ ಪ್ರಯತ್ನಮಾಡಬಹುದು.